ನ್ಯಾಯಾಧೀಶರನ್ನು ನೇಮಕ ಮಾಡಲು ಸಹಮತಿಗಾಗಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಪತ್ರವನ್ನು ಬರೆಯಲಾಗಿದೆ. ನೇಮಕ ಆಜ್ಞೆಯನ್ನು ನಿರೀಕ್ಷಿಸಲಾಗಿದೆ.

ಇ) ಪ್ರಸ್ತಾವನೆ ಇದೆ, ಇದರ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಲಾಗುವುದು.

ಬೆಂಗಳೂರಿನ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳ ಭರ್ತಿ

165 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರತಕ್ಕ ನ್ಯಾಯಾಧೀಶರುಗಳ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 5 (ಐದು)

ಆ) ಪ್ರಸ್ತಾವನೆ ಉಚ್ಚ ನ್ಯಾಯಾಲಯದಿಂದ ಬಂದ ನಂತರ, ಸರ್ಕಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉಡುಪಿ ತಾಲ್ಲೂಕಿನ ನಿಟ್ಟೂರಿನಲ್ಲಿ 110 ಕೆ.ವಿ. ಸಾಮರ್ಥ್ಯದ ವಿದ್ಯುತ್ ಕೇಂದ್ರ ಸ್ಥಾಪನೆ

345-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ತಾಲ್ಲೂಕಿನ ನಿಟ್ಟೂರಿನಲ್ಲಿ ವಿಷ್ಣನ್ ಡೆವಲಪ್‌ಮೆಂಟಿನ ಆರ್ಥಿಕ ಧನ ಸಹಾಯದಿಂದ 110 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರಕ್ಕೆ ಸರ್ಕಾರದವರು ಮಂಜೂರಾತಿ ನೀಡಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು.*

ಇ) *ಈ ಕಾಮಗಾರಿ ಅಂದಾಜು ವೆಚ್ಚ ಎಷ್ಟು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಈ ಕಾಮಗಾರಿಯ ಪೂರ್ವಭಾವಿ ಸಿವಿಲ್ ಕೆಲಸಗಳನ್ನು ಪ್ರಸಕ್ತ ವರ್ಷವಾದ 1995-96ರಲ್ಲಿ ಪ್ರಾರಂಭಿಸಲಾಗಿದೆ.

ಇ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 369.5 ಲಕ್ಷ

ಉಡುಪಿ ತಾಲ್ಲೂಕಿನ ಬ್ರಹ್ಮಾವರ ಕೆ.ಇ.ಬಿ. ಉಪ ವಿಭಾಗದ ಉಗ್ರಣ ಪ್ರಾರಂಭ

346-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಬ್ರಹ್ಮಾವರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಪ ವಿಭಾಗವನ್ನು ಪ್ರಾರಂಭಿಸಿ ಎಷ್ಟು ವರ್ಷಗಳಾದವು?

ಆ) ಅಲ್ಲಿ ಉಗ್ರಾಣವನ್ನು ತೆರೆಯಲು ಸರ್ಕಾರದವರು ಪರಿಶೀಲಿಸುವರೇ?

ಇ) ಹಾಗಿದ್ದಲ್ಲಿ ಉಗ್ರಾಣವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಎರಡು ವರ್ಷಗಳು

ಆ) ಪರಿಶೀಲನೆಯಲ್ಲಿದೆ

ಇ) ಸದರಿ ಉಗ್ರಾಣವನ್ನು ತೆರೆಯಲು ಬೇಕಾಗಿರುವ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದ್ದು, ತದನಂತರ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಮಂಜೂರಾತಿ

343-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಸರ್ಕಾರದವರು ಯಾವಾಗ ಮಂಜೂರಾತಿ ನೀಡಿದ್ದಾರೆ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು? ಹಾಗೂ ಈವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆ ಕೆಲಸ ಕಾರ್ಯ ಈಗ ಯಾವ ಹಂತದಲ್ಲಿದೆ?

ಈ) ಈ ಯೋಜನೆಯನ್ನು ಖಾಸಗಿಯವರಿಗೆ ವಹಿಸುವ ಆಲೋಚನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲ್ಪೆಯಲ್ಲಿ ಬೀಚ್ ರಿಸಾರ್ಟ್ಸ್ ಯೋಜನೆಯನ್ನು 1979ರಲ್ಲಿ ಆರಂಭಿಸಲಾಯಿತು.

ಆ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲ್ಪೆ, ಮಡಿಕೇರಿ ಹಾಗೂ ಇತರ ಯೋಜನೆಗಳಿಗೆ ಸೇರಿ ಒಟ್ಟು ರೂ. 109.96 ಲಕ್ಷಗಳ ಅನುದಾನ ನೀಡಲಾಗಿದೆ. ಅದಾಗ್ಯೂ, ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಮಾತ್ರ ದಿನಾಂಕ 31-3-95ರ ವರೆಗೆ ಒಟ್ಟು 138.13 ಲಕ್ಷ ಖರ್ಚಾಗಿರುತ್ತದೆ.

ಇ) ಈ ಯೋಜನೆಯ ಕಾರ್ಯವನ್ನು 1986 ಆಗಸ್ಟ್ ತಿಂಗಳಲ್ಲಿ ನಿಲ್ಲಿಸಲಾಯಿತು. ಬೀಚ್ ರೆಸಾರ್ಟ್ಸ್ ಕಟ್ಟಡ ನಿರ್ಮಾಣದ ಕಾರ್ಯ ಅಪೂರ್ಣಗೊಂಡಿದೆ.

ಈ) ಹೌದು.

ಉ) ಸರ್ಕಾರದ ಅನುಮತಿಯಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು, ಈ ಸ್ವತ್ತನ್ನು ಯಥಾಸ್ಥಿತಿಯ ಆಧಾರದ ಮೇಲೆ ಮಾರಾಟ ಮಾಡುವುದಕ್ಕೆ ಖಾಸಗಿಯವರಿಂದ ಟೆಂಡರ್‌ಗಳನ್ನು ಕರೆಯಲಾಗಿ, ಸದರಿ ಜಾಹೀರಾತಿಗೆ ಉತ್ತರವಾಗಿ ಬಂದ ಏಕೈಕ ಟೆಂಡರ್ ಅತ್ಯಲ್ಪ ಮೊತ್ತವಾದುದರಿಂದ ತಿರಸ್ಕರಿಸಲ್ಪಟ್ಟಿತು. ಆದಾಗ್ಯೂ ಕೆ.ರಾ. ಸರ್ಕಾರಿ ನೌಕರರ ಸಂಘವು ಇದನ್ನು ಖರೀದಿಸಲು ಮುಂದೆ ಬಂದಿದ್ದು ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.